ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 06-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಕುಂದಾಪುರದ ಆಸ್ತಿ ಮಾರಾಟ ಮಾಡಿದ ಕ್ರಯಪತ್ರವನ್ನು ನಾನು ಮೊದಲು ನೋಡಿದ್ದೆ ಈಗ ನೋಡಿಲ್ಲ. ಆ ಆಸ್ತಿಯ ಬಾಬ್ತು ಕ್ರಯಪತ್ರ ಮಾಡುವ ಸಮಯದಲ್ಲಿ ಆಸ್ತಿಯ ಬಗ್ಗೆ ನ್ಯಾಯಲಯದಲ್ಲಿ ವ್ಯಾಜ್ಯ ಗಳು ಇದ್ದವು ಎಂದರೆ ಸಾಕ್ಷಿ ಮಾರಾಟ ಮಾಡುವಾಗ ವ್ಯಾಜ್ಯ ಇರಲಿಲ್ಲ ಅದಕ್ಕಿಂತ ಮೊದಲು ಇತ್ತು ಎಂದು ತಿಳಿಸಿರುತಾರೆ . ನ್ಯಾಯಲಯ ದಲ್ಲಿ ಇದ್ದ ವ್ಯಾಜ್ಯದ ಡಿಕ್ರಿ ತಂದೆಯ ಪರವಾಗಿ ಆಗಿತ್ತು. ನ್ಯಾಯಲಯದಲ್ಲಿ ಕೇಸಿಗಾಗಿ ಓಡಾಟ ಮತ್ತು ಹೋರಾಟ ಮಾಡಿದವರು ನನ್ನ ತಂದೆ ಮತ್ತು ನನಗೆ ಜಿಪಿಎ ನ್ನು ಕೊಟ್ಟಿದ್ದ ಆದಾರದ ಮೇಲೆ ನಾನು ಕೂಡ ಓಡಾಟ ಹೋರಾಟ ಮಾಡಿರುತ್ತೇನೆ . ನನ್ನ ತಂದೆ ನನಗೆ ಯಾವಾಗ ಜಿಪಿಎ ಕೊಟ್ಟರು ಎಂದು ನೆನಪಿಲ್ಲ . ಸದರಿ ಜಿಪಿಎ ನನ್ನ ಬಳಿ ಇಲ್ಲ ನನ್ನ ಅಣ್ಣ ಬಳಿ ಇರಬಹುದು . ನಾನು ಸದ್ರಿ ನಮ್ಮ ತಂದೆ ಕೊಟ್ಟಿದ್ದ ಜಿಪಿಎ ನ್ನು ನ್ಯಾಯಲಯಕ್ಕೆ ಹಾಜರುಪಡಿಸಿದ್ದು ಅದನ್ನು ವ್ಯಾಜ್ಯ ಮುಗಿದ ನಂತರ ವಾಪಸ್ಸು ತೆಗೆದುಕೊಂಡಿದ್ದೆನೋ ಇಲ್ಲವೋ ಎಂದು ನೆನಪಿಲ್ಲ . ಅಂಗಡಿ ಖಾಲಿ ಮಾಡಿಸಲು ನನ್ನ ತಂದೆ ಕೇಸನ್ನು ಹಾಕಿದ್ದರು . ಕ್ರಯಪತ್ರ ಮಾಡಿಕೊಡುವಾಗ ಸದ್ರಿ ಸ್ವತ್ತು ನನ್ನ ತಂದೆಯ ಸ್ವಾಧೀನಕ್ಕೆ ಬಂದಿತು . ಸ್ವಾಧೀನ ಕೊಟ್ಟು ಮಾರಾಟ ಮಾಡಿದ್ದೆವೋ ಇಲ್ಲವೋ ಎಂದು ಈಗ ನೆನಪಿಲ್ಲ . ನಾನು ನನ್ನ ತಾಯಿ ನಮ್ಮ ಅಣ್ಣ ತಮ್ಮಂದಿರು ಎಲ್ಲರೂ ಹೋಗಿ ಕ್ರಯವನ್ನು ಬರೆದುಕೊಟ್ಟಿರುತ್ತೇವೆ . ಕುಂದಾಪುರ ಆಸ್ತಿ ಮಾರಾಟ ಮಾಡಿದಾಗ ಕ್ರಯಪತ್ರದಲ್ಲಿ ಬರೆದ ವಿಚಾರಗಳು ಸರಿ ಇದೆಯೇ ಇಲ್ಲವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ

ನನಗೆ ನೆನಪಿಲ್ಲ ಎಂದು ತಿಳಿಸಿರುತಾರೆ. ಅದು 80 ಲಕ್ಷ ಕ್ಕೆ ಮಾರಾಟ ಆಗಿರುತ್ತದೆ. ಕ್ರಯಪತ್ರದಲ್ಲಿ ಎಷ್ಟು ಮೊತ್ತ ಬರೆಯಲಾಗಿದೆ ಎಂದು ನೆನಪಿಲ್ಲ. ಖರೀದಿದಾರರು ಚೆಕ್ ಮೂಲಕ ಮತ್ತು ನಗದಿನ ರೂಪದಲ್ಲಿ ಹಣ ಕೊಟ್ಟಿರುತ್ತಾರೆ. ಸದ್ರಿ ಕ್ರಯಪತ್ರವನ್ನು ನ್ಯಾಯಲಯಕ್ಕೆ ಹಾಜರುಪಡಿಸಿರಬಹುದು ಸಾಕ್ಷಿಗೆ ನಿಪಿ-61 ರ ದೃಢಿಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಹೇಳಬೆಕು ಎಂದು ತಿಳಿಸಿರುತಾರೆ. ನಿಪಿ-61 ನಾನು ಹಾಜರುಪಡಿಸಿದ ಕ್ರಯಪತ್ರವಾ ಅಲ್ಲವಾ ಎಂದು ನೋಡಿ ಎಂದು ಕೇಳಿದಾಗ ಸಾಕ್ಷಿ ಅದನ್ನು ನಾನು ಹಾಜರುಪಡಿಸಿದ್ದೇನೆ ಎಂದು ತಿಳಿಸಿರುತ್ತಾರೆ . ನಿಪಿ 61 ನ್ನು ನಾನು ಕುಂದಾಪುರದ ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ತಂದಿರುತ್ತೇವೆ . ನಿಪಿ 61 ರಲ್ಲಿ ಎಷ್ಟು ಮೊತ್ತಕ್ಕೆ ಮಾರಾಟ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ 20 ಲಕ್ಷ ಎಂದು ಬರೆದಿದ್ದಾರೆ . 80 ಲಕ್ಷಕ್ಕೆ ಮಾರಾಟ ಆಯಿತು ಎಂದು ಯಾವಾ ಆದಾರದಲ್ಲಿ ಹೇಳುತಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಖರೀದಿದಾರರು ಮನೆಗೆ ಹಣ ತಂದು ಕೊಟ್ಟಿರುತಾರೆ ಅದರ ಆದಾರದ ಮೇಲೆ ಹೇಳುತಿದ್ದೇನೆ ಎಂದು ತಿಳಿಸಿರುತ್ತಾರೆ . 20 ಲಕ್ಷ ಕ್ಕೆ ಮಾರಾಟ ಮಾಡಿಲ್ಲ 80 ಲಕ್ಷಕ್ಕೆ ಮಾರಾಟ ಮಾಡಿರುತ್ತೇವೆ ಎಂದು ಆದಾಯ ತೆರಿಗೆ ಇಲಾಖೆಗೆ ದೂರು ಕೊಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಕೊಟ್ಟಿಲ್ಲ . ಮುಂದುವರಿದು ನನ್ನ ಅಣ್ಣನೇ ಆದಾಯ ತೆರಿಗೆ ಇಲಾಖೆದ್ದನ್ನು ನೋಡಿಕೊಳ್ಳುತಿದ್ದ ಎಂದು ತಿಳಿಸಿರುತ್ತಾರೆ. ಜಿಪಿಎ ಗೆ ನನ್ನ ಅಣ್ಣ ಮತ್ತು ತಂದೆ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ . 20 ಲಕ್ಷಎಂದು ಕ್ರಯಪತ್ರದಲ್ಲಿ ಬರೆದು 80 ಲಕ್ಷ ಹಣ ಖರೀದಿದಾರರು ತಂದು ಕೊಟ್ಟಾಗ ಆದಾಯ ತೆರಿಗೆ ಇಲಾಖೆಗೆ ನೀವು ದೂರು

ಕೊಡದೇ ಇರಲು ಕಾರಣ ಏನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದೂರು ಕೊಡುವ ಸಂದರ್ಭವೇ ಬರಲಿಲ್ಲ ಮತ್ತು ನಾನು ದೂರು ಕೊಡಲಿಲ್ಲ ಎಂದು ತಿಳಿಸಿರುತ್ತಾರೆ . 20 ಲಕ್ಷ ಎಂದು ಕ್ರಯಪತ್ರದಲ್ಲಿ ಬರೆದಿದ್ದು ಆದರೇ 80 ಲಕ್ಷಕ್ಕೆ ಮಾರಾಟ ಆಯಿತು ಎಂದು ನಮ್ಮ ವಾದಪತ್ರದಲ್ಲಿ ಬರೆದಿಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನನಗೆ ಬೇಕಾದ ರೀತಿಯಲ್ಲಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. 20 ಲಕ್ಷಕ್ಕೆ ಮಾರಾಟ ಆಗಿದ್ದರಿಂದಲೇ ನಾನು ದೂರು ಕೊಡಲಿಲ್ಲ ಎಂದರೆ ಸರಿಯಲ್ಲ . ನಿಪಿ 61 ಕ್ರಯಪತ್ರ ವನ್ನು ಏಕೇ ಹಾಜರುಪಡಿಸಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದ್ರಿ ಹಣ ಒಂದನೇ ಪ್ರತಿವಾದಿಯಾದ ನನ್ನ ಅಣ್ಣನ ಬಳಿ ಇದೆ ಆದ್ದರಿಂದ ಹಾಜರುಪಡಿಸಿದ್ದೇನೆ ಎಂದು ತಿಳಿಸಿರುತ್ತಾರೆ. ಐಟಿ ರಿಟನ್ಸ್ ನಲ್ಲಿ ಮಾರಾಟ ಮಾಡಿದ ಬಗ್ಗೆ ನನ್ನ ಬಾಬ್ತು ಎಷ್ಟು ಎಂದು ನಿಮ್ಮ ರಿಟನ್ಸ್ ನಲ್ಲಿ ಕಾಣಿಸಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಿಲ್ಲ ಎಂದು ತಿಳಿಸಿರುತಾರೆ. ಕುಂದಾಪುರದ ಆಸ್ತಿ ಮಾರಾಟ ಮಾಡುವಾಗ ನಮ್ಮ ಎಲ್ಲರ ಜಂಟಿ ಹಕ್ಕಿನ ಆಸ್ತಿಯಾಗಿತ್ತು. ಕೋಟೆ ಗ್ರಾಮದ ಆಸ್ತಿಯನ್ನು ಸರೋಜಿನಿ ಎನ್ನುವವರಿಂದ ನಮ್ಮ ಅಣ್ಣ ಒಂದನೇ ಪ್ರತಿವಾದಿ ಖರೀದಿಸಿರುತಾರೆ . ನಿಪಿ 62 ನ್ನು ನಾನು ಓದಿ ನೋಡಿ ಹೇಳಬೇಕಾಗಿರುತ್ತದೆ. ನನ್ನ ಅಣ್ಣ ನಿಪಿ 62 ನ್ನು ರೂ 16,00,000 ಖರೀದಿಸಿರುತ್ತಾರೆ. ಆದರೇ ನೊಂದಾವಣೆಯನ್ನು ರೂ 3,49,650/- ಗಳಿಗೆ ಕಾಣಿಸಿರುತ್ತಾರೆ . ನಿಪಿ 62 ರಲ್ಲಿ ಬರೆದಿರುವ ವಿಚಾರಗಳು ಸರಿ ಇದೆಯಾ ಇಲ್ಲವಾ ಎಂದು ನೋಡಿ ಹೇಳಬೇಕಾಗುತ್ತದೆ . ರೂ 16,00,000 ಕ್ಕೆ ಖರೀದಿ ಮಾಡಿದ್ದು ಎಂದು ಈಗ ಹೇಳುವುದನ್ನು ಬಿಟ್ಟರೇ ಬೇರೆ ಎಲ್ಲಾದರೂ ಹೇಳಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ

ಎಂದು ತಿಳಿಸಿರುತ್ತಾರೆ. 25-09-2012 ರಂದು ಪೃಥ್ವಿರಾಜ್ ಶೆಟ್ಟಿ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದನ್ನು ಕೂಡ ನ್ಯಾಯಲಯಕ್ಕೆ ಹಾಜರುಪಡಿಸಿರಬಹುದು. ಆದರೇ ನಾನು ಅದನ್ನು ಓದಿಕೊಂಡು ಬಂದಿಲ್ಲ . ನನ್ನ ಅಣ್ಣ ಮಾರಾಟ ಮಾಡಿದ ನಿಪಿ-53 ಕ್ರಯಪತ್ರಕ್ಕೆ ಸಾಕ್ಷಿದಾರನಾಗಿ ನಾನು ಸಹಿ ಮಾಡಿದ್ದೇನೆ  ಎಂದರೆ ಸರಿ . ನನ್ನ ತಂದೆಗೆ ಅವರ ಸಂಭಳ ಬಿಟ್ಟರೇ ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸ ರಿಯಲ್ಲ . ನಿಮ್ಮ ತಂದೆ ಅವರ ಐಟಿ ರಿಟನ್ಸ್‌ನಲ್ಲಿ  ಅವರು ಪಡೆದ ಸಾಲದ ಬಗ್ಗೆ ನಮೂದಿಸಿದ್ದಾರಾ  ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಎಲ್ಲವನ್ನು ಒಂದನೇ  ಪ್ರತಿವಾದಿ ನನ್ನ ಅಣ್ಣ ನೋಡಿಕೊಳ್ಳುತಿದ್ದ ಎಂದು ತಿಳಿಸಿರುತಾರೆ .

ನನ್ನ ತಾಯಿ ಶಕುಂತಳ ಕೊಡ್ಗಿ ಶಿವಳ್ಳಿ ಗ್ರಾಮದ 50 ಸೆಂಟ್ಸ್ ಜಾಗವನ್ನು 18-05-1974 ರ ಪ್ರಕಾರ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ .  ಸದರಿ ಕ್ರಯಪತ್ರವನು ನಾನು ಹಾಜರುಪಡಿಸಿದ್ದೇನೆ ಎಂದರೆ ಸರಿ . ಅದನ್ನು  ನಿಪಿ 55 ಎಂದು ಗುರುತಿಸಲಾಗಿದೆ . 1974 ರಲ್ಲಿ ಕ್ರಯಕ್ಕೆ ಪಡೆಯುವಾಗ ಆರ್ ಸಿಸಿ ಮನೆ ಕಟ್ಟಡ ಮತ್ತು ಭಾವಿ ಇತ್ತು ಎಂದರೆ ಸರಿ . ನನ್ನ ತಾಯಿ ಸದ್ರಿ 1970 ರಲ್ಲಿ ಯೇ ಗೇಣಿಗೆ ಪಡೆದು ಅದರಲ್ಲಿ ಹಟ್ಟಿ ಕೊಟ್ಟಿಗೆ , ಕಾಂಪೌಂಡ್ , ಪಾಗಾರ ಮತ್ತು ಈಶಾನ್ಯೆ ಮೂಲೆಯಲ್ಲಿ ಕಬ್ಬಿಣದ ಗೇಟ್ ಹಾಕಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದು ಮೊದಲೇ ಇತ್ತು ಎಂದು ತಿಳಿಸಿರುತಾರೆ. ನಾನು ಕ್ರಯಪತ್ರವನ್ನು ಓದಿ ನೋಡಿದ್ದೆನೋ ಇಲ್ಲವೋ ನೆನಪಿಲ್ಲ. ಸದರಿ ಕ್ರಯಪತ್ರದಲ್ಲಿ ಹಟ್ಟಿಕೊಟ್ಟಿಗೆ ಬರೆದಿರುವ ಮತ್ತು ಗೇಣಿ ಬಗ್ಗೆ ಬರೆದಿರುವ ವಿಚಾರದ ಬಗ್ಗೆ ನೆನಪಿಲ್ಲ . ನನ್ನ ತಾಯಿ ಅದರಲ್ಲಿ ಹೈನುಗಾರಿಕೆ

ಮಾಡುತಿದ್ದರು ಎಂದರೆ ಸರಿಯಲ್ಲ. ಆದರೇ ಮನೆಗೆ ಬೇಕಾದಷ್ಟು ಹಾಲಿಗಾಗಿ ಹಸುಗಳನ್ನು ಸಾಕುತಿದ್ದರು ಎಂದು ತಿಳಿಸಿರುತಾರೆ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.